# ಪಂಚೆಯ ವಿಷ್ಯ... ಬ್ಯಾಡವೊ ಶಿಷ್ಯ...

'ಮೇಡಂ ನೀವು ಬರೀ ಸೀರೆ, ಚೋಲಿ, ನೈಟಿ, ದಾವಣಿ ಬಗ್ಗೆ ಬರೀತೀರಲ್ಲ ಪ್ಯಾಂಟು ಶರ್ಟು ಪಂಚೆ ಬಗ್ಗೇನೂ ಸ್ವಲ್ಪ ಬರೀರಿ' ಎಂದು ಮೇಲ್ (male) ಓದುಗರೊಬ್ಬರು ಮೇಲ್ (mail) ಮಾಡಿದ್ದರು. ಥಟ್ಟನೆ, ಹೌದಲ್ವಾ... ನಾನೇಕೆ ಪುರುಷರ ಅಟೈರ್ ಬಗ್ಗೆ ಒಂದೂ ಲೇಖನ ಬರೆದಿಲ್ಲ ಎನಿಸಿತು. ಜೊತೆಗೆ ಫೆಮಿನಿಸ್ಟ್ ಪಟ್ಟ ಹೊರಿಸಿ ಬಿಟ್ಟಾರು ಎಂಬ ಆತಂಕವೂ ಜೊತೆಯಾಯ್ತು. ಅದಕ್ಕೆ ಪುಷ್ಟಿ ಕೊಡುವಂತೆ ಇತ್ತೀಚೆಗೆ ಬೆಂಗಳೂರಿನ ಮಾಲ್ ಒಂದಕ್ಕೆ ಯುವಕನೊಬ್ಬ ಪಂಚೆ ಧರಿಸಿದ್ದ ತನ್ನ ರೈತ ತಂದೆಯನ್ನು ಸಿನಿಮಾ ನೋಡಲು ಕರೆದೊಯ್ದಾಗ ಸೆಕ್ಯೂರಿಟಿ ಗಾರ್ಡ್ ಒಳಬಿಡದೆ ದೊಡ್ಡ ಪಂಚಾಯಿತಿಯೇ ಆಯಿತು. ಕೊನೆಗೆ ಮೇಲಿನವರು 'ಪಂಚೆಯ ವಿಷ್ಯ ಬ್ಯಾಡವೊ ಶಿಷ್ಯ...' ಎಂದು ತಮ್ಮ ಸಿಬ್ಬಂದಿಗೆ ಸೂಚನೆ ನೀಡಿ ಆ ಹಿರಿಯರನ್ನು ಗೌರವಿಸಿ ಚಲನಚಿತ್ರ ನೋಡಲು ಅನುವು ಮಾಡಿಕೊಟ್ಟರು.

ಉಡುಪಿನಿಂದ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಅಳೆಯಲಾಗದು. ಆದರೂ ಡ್ರೆಸ್‌ಕೋಡ್ ಕಾನ್ಸೆಪ್ಟ್ ಇತ್ತೀಚೆಗೆ ಹಲವೆಡೆ ಭಾರೀ ಸದ್ದು ಮಾಡುತ್ತಿದೆ. ನೈಟಿ ಟ್ರೋಲ್ ಆದಷ್ಟು ಬಹುಶಃ ಯಾವ ಉಡುಪೂ ಆದದ್ದಿಲ್ಲ. ಬರ್ಮುಡಾ, ಬಿಕಿನಿ, ಟೋರ್ನ್ ಜೀನ್ಸ್, ಮೈಕ್ರೋ ಮಿನಿ ಸ್ಕರ್ಟ್ ಧರಿಸಿದವರನ್ನು ಅಲೌ ಮಾಡುವ ಮಾಲುಗಳು ನಮ್ಮ ಸಾಂಪ್ರದಾಯಿಕ ಉಡುಪು ಪಂಚೆಯನ್ನು ಕಡೆಗಣಿಸಿದ್ದು ಅಕ್ಷಮ್ಯ.

'ಆಲ್ ದ ರಜನಿ ಫ್ಯಾನ್ಸ್ ಡೋಂಟ್ ಮಿಸ್ ದ ಚಾನ್ಸ್... ಲುಂಗಿ ಡ್ಯಾನ್ಸ್... ಲುಂಗಿ ಡ್ಯಾನ್ಸ್ ... ಲುಂಗಿ ಡ್ಯಾನ್ಸ್... ಲುಂಗಿ ಡ್ಯಾನ್ಸ್...' ಎನ್ನುತ್ತಾ ದೊಗಲೆ ಚಡ್ಡಿಯ ಮೇಲಿನ ಲುಂಗಿಯನ್ನು ದಶದಿಕ್ಕುಗಳೆಡೆಗೂ ಚಕಚಕನೆ ತಿರುಗಿಸುತ್ತಾ ಚೆನ್ನೈ ಎಕ್ಸ್‌ಪ್ರೆಸ್‌ನಲ್ಲಿ ಶಾರುಖ್ ದೀಪಿಕಾ ಟ್ರೂಪ್ ಹುಚ್ಚೆದ್ದು ಕುಣಿದದ್ದು ಇತಿಹಾಸ.

ಹಿಂದೆ ಹೆಣ್ಣು ಮಕ್ಕಳು ಪ್ರಾಯಕ್ಕೆ ಬಂದರೆ ದಾವಣಿ ಧರಿಸುತ್ತಿದ್ದರು. ಅಂತೆಯೇ ಯುವಕರು ಪಂಚೆಗೆ ಪ್ರಮೋಟ್ ಆಗುತ್ತಿದ್ದರು. ಪಂಚೆಯೂ ಸೀರೆಯಂತೆಯೇ ಯಾವ ಕತ್ತರಿ ಪ್ರಯೋಗ, ಹೊಲಿಗೆಯ ಬಂಧನಕ್ಕೂ ಸಿಲುಕದೆ ಅನುಕೂಲಕ್ಕೆ ತಕ್ಕಂತೆ ತೆರೆದುಕೊಳ್ಳುವ ಮಲ್ಟಿಪರ್ಪಸ್ ಗುಣದ್ದು.

ಹೊದ್ದರೆ ಹೊದಿಕೆಯಾದೆ; ಒದ್ದೆಯೊಳು ಮಡಿಯಾದೆ; ಚಿಂದಿಯಾದೊಡೆ ಹಸುಳೆಗೆ ಡೈಪರ್ರೂ ಆದೆ; ಹರಿಯದೆ ಹಾಸಿದರೆ ಸಂಡಿಗೆಗೂ base ಆದೆ; ನೀನಾರಿಗಾದೆಯೋ...? ಎಂದು ಎಚ್ಚರಿಸುವ ಗುಣದ್ದು. ಶುರುವಿನಲ್ಲಿ ಸೀರೆ ಉಡಲು ಬಾರದೆ ತೊಡರಿ ಬೀಳುವ ಹೆಣ್ಣು ಮಕ್ಕಳಂತೆಯೇ ಉಟ್ಟ ಪಂಚೆ ಕಳಚಿ ಬಿದ್ದು ಪೆಚ್ಚಾದ ಬಾಲಕರಿಗೂ ಬರವಿಲ್ಲ. ಬೈಂದೂರಿನ ಬೀಚಿನಲ್ಲೊಮ್ಮೆ ಶಾಸಕರ ಪಂಚೆ ಕಳಚಿ ಬಿದ್ದಾಗಿನ ವಿಡಿಯೊವೊಂದು ಭಾರಿ ವೈರಲ್



ಕನ್ನಡದ ಕಂದನಿಗೆ ಪಂಚೆಸಿಂಗಾರ!

ಯಾವ ಕತ್ತರಿ ಪ್ರಯೋಗ, ಹೊಲಿಗೆಯ ಬಂಧನಕ್ಕೂ ಸಿಲುಕದೆ ಅನುಕೂಲಕ್ಕೆ ತಕ್ಕಂತೆ ಉಪಯೋಗಕ್ಕೆ ಬರುವ ಮಲ್ಟಿಪರ್ಪಸ್ ಗುಣ 'ಪಂಚೆ'ಯದ್ದು. ಆಧುನಿಕ ಉಡುಗೆಗಳ ನಡುವೆ ಔಟ್‌ಡೇಟೆಡ್ ಆಗಿದ್ದ ಲುಂಗಿ ಕಾಲ ಕ್ರಮೇಣ ತನ್ನ ಐಡೆಂಟಿಟಿ ಬದಲಿಸಿಕೊಳ್ಳುತ್ತಿದೆ...

■ ಸುಮಾ ರಮೇಶ್